ಮೇಲಿನ ಯೋಜನೆಯ ಅನುಷ್ಠಾನದ ಒಟ್ಟು ಅವಧಿ 3 ವರ್ಷಗಳಿದ್ದು ಯೋಜನೆಯನ್ನು 2010–11 ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಬಸ್ ನಿಲ್ದಾಣದ ಕಾಮಗಾರಿ

64. ಶ್ರೀ ಎಂ.ಟಿ.ಕೃಷ್ಣಪ್ಪ.

ಆರ್. ಅಶೋಕ ಮಾನ್ಯ ಸಾರಿಗೆ ಸಚಿವರು.

ಅ) ತುಮಕೂರು ಜಿಲ್ಲೆ ತುರುವೇಕೆರೆ ಸರ್ಕಾರಿ ಬಸ್‌ನಿಲ್ದಾಣದ ಕಾಮಗಾರಿಯ ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತುರುವೇಕೆರೆ ಬಸ್ ನಿಲ್ದಾಣದ ಕಾಮಗಾರಿಗಳನ್ನು ದಿನಾಂಕ: 02–06–2008ರಂದು ಪ್ರಾರಂಭಿಸಲಾಗಿದ್ದು, ನಿಗದಿತ ಕಾಲಾವಧಿಯಾದ ದಿ: 1–6–2009 ಕ್ಕೆ ಪೂರ್ಣಗೊಳ್ಳಬೇಕಾಗಿತ್ತು. ಈ ಕಾಮಗಾರಿಯು ಆಗಸ್ಟ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ.

ಆ) ಈ ಕಾಮಗಾರಿಯು ಕಳಪೆ ಕಾಮಗಾರಿಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕಾಮಗಾರಿಯನ್ನು ವಿಸ್ತೃತ ವಿವರಣೆಯಂತೆ ನಿರ್ವಹಿಸಲಾಗುತ್ತಿದ್ದು, ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಯ ಕಂಡುಬರುವುದಿಲ್ಲ.

ಇ) ಹಾಗಿದ್ದಲ್ಲಿ ಈ ಕಳಪೆ ಕಾಮಗಾರಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಅನುದಾನ

200 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)

ಬಿ.ಎಸ್. ಯಡಿಯೂರಪ್ಪ ಮಾನ್ಯ ಮುಖ್ಯ ಮಂತ್ರಿಯವರು

ಅ) 2008–09ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆಯಾದ: ಮೀಸಲಿರಿಸಿದ್ದ ಒಟ್ಟು ಅನುದಾನವೆಷ್ಟು (ಯೋಜನಾವಾರು ವಿವರ ಒದಗಿಸುವುದು)?

2008–09ನೇ ಸಾಲಿನ ಪರಿಸ್ಕೃತ ಅಂದಾಜಿನಂತೆ ಯೋಜನೇತರಕ್ಕಾಗಿ 34167 ಕೋಟಿ ರೂ.ಗಳನ್ನು ಮತ್ತು ಯೋಜನೆಗಾಗಿ 20063 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ತಾತ್ಕಾಲಿಕ ಲೆಕ್ಕದಂತೆ, ಯೋಜನೇತರದಲ್ಲಿ 34276 ಕೋಟಿ ರೂ.ಗಳನ್ನು ಹಾಗೂ ಯೋಜನೆಯಲ್ಲಿ 19884 ರೂ.ಗಳನ್ನು ಈ ಸಾಲಿನಲ್ಲಿ ಖರ್ಚು ಮಾಡಲಾಗಿದೆ. ಮಹಾಲೇಖಪಾಲರು ಸವಿವರ ಯೋಜನಾವಾರು ಲೆಕ್ಕವನ್ನು ಇದುವರೆಗೂ ಒದಗಿಸಿರುವುದಿಲ್ಲ.

ಆ) 2008–09ನೇ ಸಾಲಿನ ಆಯವ್ಯಯದಲ್ಲಿ ಶೇಕಡಾ 18ರ ಮೀಸಲಾತಿಗೆ ಬಿಡುಗಡೆ ಮಾಡಿದ ಹಾಗೂ ಮೀಸಲಿಟ್ಟಿದ್ದ ಒಟ್ಟು ಅನುದಾನವೆಷ್ಟು (ಸಂಪೂರ್ಣ ವಿವರ ಒದಗಿಸುವುದು)?

2008–09ನೇ ಸಾಲಿಗಾಗಿ ಆಯವ್ಯಯದಲ್ಲಿ 4060.64 ಕೋಟಿ ರೂ.ಗಳನ್ನು ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

(ರೂ. ಕೋಟಿಗಳಲ್ಲಿ)

	ವಿಶೇಷ ಘಟಕ ಯೋಜನೆ	ಗಿರಿಜನ ಉಪಯೋಜನೆ
ರಾಜ್ಯವಲಯ	2413.11	975.67
ಜಿಲ್ಲಾ ವಲಯ	503.48	168.38

ತಾತ್ಕಾಲಿಕವಾಗಿ ಕ್ರೋಢೀಕರಿಸಿದಂತೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಾಗಿ ಈ ಸಾಲಿನಲ್ಲಿ 3564 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ವಿಷಯ : ಗುಹಾಂತರ ದೇವಸ್ಥಾನದ ಅಭಿವೃದ್ಧಿ.

202 ಶ್ರೀ ತಿಪ್ಪೇಸ್ವಾಮಿ

ಜಿ.ಜನಾರ್ಧನ ರೆಡ್ಡಿ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು.

ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ಬೆರೀಸಮಂಡಲಹಟ್ಟಿ ಹತ್ತಿರದ ಹೊಸಗುಡ್ಡ ಐತಿಹಾಸಿಕ ಗುಹಾಂತರ ದೇವಾಲಯವನ್ನು ಐತಿಹಾಸಿಕ ಪ್ರವಾಸೀತಾಣವನ್ನಾಗಿ ಮಾಡಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಈ ಗುಹಾಂತರ ದೇವಾಲಯವು ರಾಜ್ಯ ಸಂರಕ್ಷಿತ ಸ್ಮಾರಕವಾಗಿದೆ. ಪ್ರಸ್ತುತ ಇಲಾಖೆಯ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಆ) ಇದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೈಗೊಂಡಿರುವ ಕ್ರಮಗಳಾವುವು;

ಚಿತ್ರದುರ್ಗ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಈ ಸ್ಥಳದ ಬಗ್ಗೆ ವರದಿ ತರಿಸಿಕೊಳ್ಳಲಾಗುವುದು.

ಇ) ಹಾಗಿಲ್ಲದಿದ್ದಲ್ಲಿ ಎಂದಿನಿಂದ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು?

ವರದಿ ಬಂದ ನಂತರ ಅಗತ್ಯವಿದ್ದಲ್ಲಿ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು